ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/33/2016-17. ದಿನಾಂಕ:26-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆಂಚಮ್ಮ ಉರುಫ್ ಮನೋಹರಮ್ಮ ಗಂಡ ಚನ್ನನಗೌಡ<br>2)ಅಜ್ಜಪ್ಪಳ ಬಸವರಾಜಪ್ಪ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ<br>3)ಅಜ್ಜಪ್ಪಳ ಶೇಖರಪ್ಪ ತಂದೆ ಅಜ್ಜಪ್ಪಳ ಲೇಟ್ ಚನ್ನಬಸಪ್ಪ<br>4)ಅಜ್ಜಪ್ಪಳ ಬಸವನಗೌಡ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ<br>ಕನ್ನಾಯಕನಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಕನ್ನಾಯಕನಕಟ್ಟೆ ಗ್ರಾಮದ ಸನಂ 282ಬಿ. ವಿಸ್ತೀರ್ಣ 1-65. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕನ್ನಾಯಕನಕಟ್ಟೆ ಗ್ರಾಮದ ಸನಂ 282ಬಿ. ವಿಸ್ತೀರ್ಣ 1-65. ಎಕ್ರೆ ಜಮೀನನ್ನು ಸದರಿ ಗ್ರಾಮದ ಅಜ್ಜಪ್ಪಳ ಬಸವನಗೌಡ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕನ್ನಾಯಕನಕಟ್ಟೆ ಇವರು ನಮೂನೆ-21 ನೋಟಿಸನ್ನು ದಿನಾಂಕ 14-02-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಂಶವೃಕ್ಷಕ್ಕೂ ನಮೂನೆ-21ಕ್ಕೂ ಹಾಗೂ ಮರಣ ಪ್ರಮಾಣ ಪತ್ರಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 42/2015-16. ದಿನಾಂಕ 13-03-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 28-06-2016 ರಿಂದ 26-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕನ್ನಾಯಕನಕಟ್ಟೆ ಗ್ರಾಮದ ಸನಂ 282ಬಿ. ವಿಸ್ತೀರ್ಣ 1-65. ಎಕ್ರೆ ಜಮೀನು ಅರ್ಜಿದಾರರ ತಂದೆಯವರಾದ ಚನ್ನಬಸಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರು ದಿನಾಂಕ 25-09-1999 ರಂದು ಹಾಗೂ ಇವರ ಹೆಂಡತಿ ರೇವಮ್ಮ ಗಂಡ ಚನ್ನಬಸಪ್ಪ ಇವರು ದಿನಾಂಕ 21-09-2000 ರಂದು ನಿಧನ ಹೊಂದಿರುತ್ತಾರೆ. ಕಾರಣ ಸದರಿ ಚನ್ನಬಸಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಪು.ತಿ.ನೋ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕನ್ನಾಯಕನಕಟ್ಟೆ ಗ್ರಾಮದ ಸನಂ 282ಬಿ. ವಿಸ್ತೀರ್ಣ 1–65. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಚನ್ನಬಸಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರಾದ ಅಜ್ಜಪ್ಪಳ ಬಸವರಾಜಪ್ಪ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ. ಅಜ್ಜಪ್ಪಳ ಶೇಖರಪ್ಪ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ. ಅಜ್ಜಪ್ಪಳ ಬಸವನಗೌಡ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ. ಇವರುಗಳ ಹೆಸರುಗಳನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 26–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ಬಸವನಗೌಡ ತಂದೆ ಲೇಟ್ ಅಜ್ಜಪ್ಪಳ ಚನ್ನಬಸಪ್ಪ ಹಾಗೂ ಇತರರು ಕನ್ನಾಯಕನಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಎಸ್.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.